ಹಿಂಗಾಗಿಯೇ ಸೇನಾಧಿಪತಿ ಪರಶುರಾಮಪ್ಪನಿಗೂ ಇವನೆಂದರೆ ಇಷ್ಟ. ಸೊಗಸಾದ ವಿಗ್ರಹಗಳನ್ನು ಕೆತ್ತುವ ಸಲುವಾಗಿಯೇ ಬಿಡುವಾಗುತ್ತಲೇ ಯೋಗ್ಯ ಕಲ್ಲುಗಳನ್ನರಿಸಿ ಕಾಡುಮೇಡು ಅಲೆಯೋನು. ರಾತ್ರಿಯೆಲ್ಲಾ ತಾನೂ ನಿದ್ದೆಗೆಡುವುದಲ್ಲದೆ ಚಾಣ ಸುತ್ತಿಗೆಗೂ ನಿದ್ದೆಯಿಲ್ಲದಂತೆ ಮಾಡುತ್ತಿದ್ದ. 'ನಾಯೇನ್ ನಿದ್ದಿಮಾಡೋನೋ ಎಲ್ಲಾರ ಓಡಿ ಹೋಗನಲೇ ಭಾಡ್ಕೋವ್' ದಣಿದಿದ್ದ ನಿಂಗ ಕಟೆಯುವ ಸದ್ದಿಗೆ ನಿದ್ದೆ ಬಾರದೆ ಗೊಣಗುತ್ತಲೇ ತನಗೇ ತಿಳಿಯದಂತೆ ನಿದ್ದೆಗೆ ಜಾರುತ್ತಿದ್ದ. ನಿದ್ದೆ ಬಾರದಿದ್ದರೆ ಮಾದನ ಜೊತೆ ರಾಮಕ್ಕಳೂ ಕೂತು ರೆಪ್ಪೆಬಡಿಯದೆ ಅವನ ಕೆತ್ತನೆಯನ್ನು ನೋಡೋಳು. ಅವನು ಮಾಡುವ ಕೆಲವು ದೊಡ್ಡ ಅಳತೆಯ ವಿಗ್ರಹಗಳು ವಾರಗಟ್ಟಲೆ ನಿದ್ದೆ ನುಂಗೋವು. ಭಾನುವಾರ ಬರುತ್ಲೂವೆ ಕೆಲವು ಹೆಣ್ಣುಮಕ್ಳು ಬಟ್ಟೆ ತೊಳೆಯಲು ಅಷ್ಟಚೌಕಾಕಾರದ ಕಾಮನ ಬಾವಿಗೆ ಬರೋರು. ಕೆಲವರು ಬಟ್ಟೆ ಮಡಿ ಮಾಡಿಕೊಂಡು ಬುಟ್ಟಿ ಹೊತ್ತು ಹೊಂಟರೆ ಹಲವರು ಅಲ್ಲೇ ಒಣಹಾಕಿ ತಂದ ಬುತ್ತಿ ಉಂಡು, ಬಟ್ಟೆಗಳು ಒಣಗುತ್ಲು ಗಂಟುಕಟ್ಟಿ ಹೊಯ್ಯೋರು. ಅವರು ಆಗೀಗ ಮಾದ ಕೆತ್ತಿಟ್ಟ ವಿಗ್ರಹಗಳನ್ನು ನೋಡೋರು. ಆ ಗುಂಪಿನಲ್ಲಿ ಇಟ್ಟಿಗಿ ಬಸಯ್ಯನ ಮಗಳು ಉಮೆಯೂ ಇರೋಳು. ಮೊಣಕಾಲವರೆಗೆ ಪಂಚೆಯುಟ್ಟು ಮೇಲೆ ವಸ್ತ್ರ ಹಾಕದೆ ಸುತ್ತಿಗೆ ಏಟು ಹಾಕುತ್ತಾ ಕೂರುತ್ತಿದ್ದ ಅವನ ಜಬರಿಗೆ ಹುರಿಗಟ್ಟಿದ ಮಾಂಸಖಂಡಗಳು ಸುರಿವ ಬೆವರಲ್ಲಿ ಬೆರೆತು ಮಿರಮಿರ ಮಿಂಚೋವು. ಹುಡುಗೀರ ಕಣ್ಣಿಗೆ ಅದೂ ಹಬ್ಬವೆ. ಇಲ್ಲಿನ ಕುಸರಿ ಕೆಲಸಕ್ಕೆಂದೇ ಪ್ರತ್ಯೇಕ ಪರಿಕರಗಳನ್ನು ಮಾದ ಬಳಸೋನು. ಕೆತ್ತುವಾಗ ಸಣ್ಣ ಹುಡಿಗಳು ಹಾರೋವು. ರೆಪ್ಪೆ ಬಡೆಯದೆ

